The question is :

"That Clauses 2 to 4, both inclusive, stand part of the Bill."

The motion was adopted.

Clauses 2 to 4, both inclusive, were added to the Bill.

Mr. SPEAKER.—Clause 1. The question is :

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri H. C. DASAPPA.—Sir, I beg to move :

"That the Betting Tax (Second Amendment) Bill, 1950, be passed."

Mr. SPEAKER.—The question is :

"That the Betting Tax (Second Amendment) Bill, 1950, be passed."

The motion was adopted.

Sri H. C. DASAPPA (Minister for Finance and Industries).—Sir, the other two Bills standing in my name may be taken up to-day, because I am not likely to be here on Monday. If to-morrow is a non-official day no Government business can be taken up. If there is any chance of extension of the House to-Monday, the Bills will have to be taken up on Monday. But I will not be here on Monday. Therefore, I may be permitted to move the other two Bills standing in my name.

Mr. SPEAKER.—Yes.

The Mysore Sales-Tax (Amendment) Bill, 1950.

Motion to consider.

Sri H. C. DASAPPA (Minister for Finance and Industries).—Sir, I beg to move ;

"That the Mysore Sales-Tax (Amendment) Bill, 1950, be taken into consideration."

ಈ ಮಾರಾಟ ತೆರಿ ತಿದ್ದುಪಡಿ ಮಸೂದೆಯಲ್ಲಿಗೆ ಎರಡು ವಿಚಾರಗಳಿವೆ. ಮೊದಲನೆಯದಾಗಿ, ಮೂಲ ಕಾನೂನಿನ 2½ನೆಯ ಸೆಕ್ಷ್ಯಪ್ರಕಾರ ಮಾರಾಟದ ತೆರಿಗೆ ಠರಾವು ಮಾಡಿದರೆ ಅದನ್ನು ಯಾರೇ ಆಗಲಿ ತಪ್ಪು ಎಂದಾಗಲಿ ಅಥವಾ ಠರಾಯಿಸಿರುವ ಮೊಬಲಗು ಕಡಿಮೆ ಮಾಡಬೇಕೆಂದಾಗಲಿ ಸಿವಿಲ್ ಕೋರ್ಟುಗಳಿಗೆ ಹೋಗಿ ವಾದಿಸುವ ಹಾಗಿಲ್ಲ. ಇದೊಂದು ಹಣಕಾಸಿಗೆ ಸಂಬಂಧಪಟ್ಟ ಮಸೂದೆಯಾದುದರಿಂದ, ತೆರಿಗೆ ಹಾಕುವುದಕ್ಕೆ ಸಂಬಂಧಪಟ್ಟದ್ದರಿಂದ ಪ್ರತಿಯೊಬ್ಬರೂ ಹೀಗೆ ವಾದ ವಿವಾದ ಹೂಡಲು ಅವಕಾಶವಿದ್ದರೆ ಈ ಕಾನೂನನ್ನು ಜಾರಿಗೆ ತರುವುದಕ್ಕೇ ಸಾಧ್ಯವಾಗುವುದಿಲ್ಲ' ಇದು ಮೂಲ ತತ್ವ. ಅದರ ಮೇರೆಯೇ ಈ ಕಾನೂನು ಈ ರೀತಿ ಮಾಡಿರುವುದು. ತೆರಿಗೆ ಹಾಕುವುದರಲ್ಲಿ ಲೋಪ ದೋಷಗಳೇನಾದರೂ ಇದ್ದರೆ, ಅದರ ವಿಚಾರವಾಗಿ ಅಪೀಲು ಮಾಡುವುದಕ್ಕೆ ಮಾರಾಟದ ತೆರಿಗೆ ಕಾನೂನಿನಲ್ಲಿ ಅವಕಾಶವಿದೆ. ನ್ಯಲ್ಪ ಮೊಬಲಗಾದರೆ ಡೆಪ್ಯುಟಿ ಕಮಿಷನರು, ಹೆಚ್ಚಿನ ಮೊಬಲಗಾದರೆ ಸೇಲ್ಸ್‌ಟ್ಯಾಕ್ಸ್ ಕಮಿಷನರು—ಇವರುಗಳಿಗೆ ಅಪೀಲುಮಾಡಬಹುದು. ಇದರ ಮೇಲೂ ಸರ್ಕಾರಕ್ಕೆ ರಿವೈಜ್ ಮಾಡುವ ಅಧಿಕಾರವಿದೆ. ಒಂದು ವೇಳೆ ಲಾ ವಿಚಾರದಲ್ಲೇನಾದರೂ ಸಮಸ್ಯೆ ಬಂದರೆ ಹೈಕೋರ್ಟಿಗೆ ಕೂಡ ಹೋಗಬಹುದು. ಆದಕಾರಣ ಸಿವಿಲ್ ಕೋರ್ಟಿನಲ್ಲಿ ತೆರಿಗೆ ವಿಚಾರದಲ್ಲಿ ವಾದ ಹೂಡಿ ಅಲ್ಲಿ ಇತ್ಯರ್ಥಮಾಡಲು ಈ ಕಾನೂನಿನಲ್ಲಿ ಅವಕಾಶವಿಲ್ಲವೆಂದು ಮಾಡಿದೆ.

ಈಗ 14 ಮತ್ತು 15ನೆಯ ಸೆಕ್ಷ್ಯಪ್ರಕಾರ ಕೆಲವು ನಂದರ್ಭಗಳಲ್ಲಿ ಕ್ರಿಮಿನಲ್ ಪ್ರಾಸಿಕ್ಯೂಷನ್ನಿಗೆ ಅವಕಾಶವಿದೆ. ಯಾರು ಈ ತೆರಿಗೆಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೋ ಯಾರು ಸಂಬಂಧಪಟ್ಟ ಲೆಕ್ಕ ಪತ್ರಗಳ ಪುಸ್ತಕಗಳನ್ನು ಹಾಜರುಮಾಡಲು ನಿರಾಕರಿಸುತ್ತಾರೋ ಅವರನ್ನು ಪ್ರಾಸಿಕ್ಯೂಟ್ ಮಾಡಲು ಅವಕಾಶವಿದೆ. ನಮ್ಮ ನರ್ಕಾರದವರ ಮತ್ತು ಮದರಾನು ಸರ್ಕಾರದವರ ಅನುಭವಕ್ಕೆ ಒಂದು ವಿಚಾರ ಬಂತು. ಅದೇನೆಂದರೆ, ಕ್ರಿಮಿನಲ್ ಪ್ರಾಸಿಕ್ಯೂಷನ್ ಆದಾಗ ಕ್ರಿಮಿನಲ್ ಕೋರ್ಟಿನಲ್ಲಿ ತೆರಿಗೆ ಹಾಕಿದುದು ತಪ್ಪು ಎಂದು ತೀರ್ಮಾನಕೊಡಲು ಅವಕಾಶವಿದೆ. ಕಾನೂನಿನಲ್ಲಿ ಯಾವ ಕೋರ್ಟಿಗೂ ಅವಕಾಶವೆಂದಿಲ್ಲ, ಸಿವಿಲ್‌ಕೋರ್ಟುಗಳಿಗೆ ಮಾತ್ರ ಅವಕಾಶವೆಂದಿದೆ, ಕ್ರಿಮಿನರ್ ಕೋರ್ಟಿಗೆ ಅಧಿಕಾರವಿದೆ ಎಂಬ ಅರ್ಥಬರುತ್ತದೆ. ಕಾನೂನಿನಲ್ಲಿ ಇದೊಂದು ಲೋಪ ಎಂಬ ವಾದ ಬಂದಿತು. ಆದುದರಿಂದ ಸಿವಿಲ್‌ಕೋರ್ಟಿನಲ್ಲಿ ಹೇಗೆ ಅವಕಾಶವಿಲ್ಲವೋ ಹಾಗೆಯೇ ಕ್ರಿಮಿನರ್ ಕೋರ್ಟಿನಲ್ಲಿಯೂ ಅವಕಾಶ ಇಲ್ಲವೆಂದು ಮಾಡಬೇಕಾಯಿತು, ಆದಕಾರಣ ಮೂಲಕಾನೂನಿನಲ್ಲಿ "ಸಿವಿಲ್" ಎಂದು ಹಾಕಿರುವುದನ್ನು ತೆಗೆದುಬಿಟ್ಟರೆ ಸರಿಹೋಗುತ್ತದೆಂದು ಇದರಲ್ಲಿ ತಿದ್ದುಪಡಿಯನ್ನು ಸೂಚಿಸಿದೆ. ಪ್ರಪಂಚದಲ್ಲಿಲ್ಲದೇ ಇರುವುದನ್ನು ನಾವು ತರುತ್ತೇವೆಂದು ಯಾರೂ ತಿಳಿದುಕೊಳ್ಳಬಾರದು. ಮದರಾಸಿನಲ್ಲಿಯೂ ಕೂಡ ನಾವು ಈಗ ತಂದಿರುವ ಕಾನೂನನ್ನೇ ತಂದು ಸೆಕ್ಷ್ಯ 16 (a) ಎಂದುಮಾಡಿದ್ದಾರೆ, ಅದು ಜಾರಿಯಲ್ಲಿದೆ. ಆದುದರಿಂದ ಈ ತಿದ್ದುಪಡಿ ಸೂಕ್ತವಾಗಿದೆ. ಇದನ್ನು ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯ ವಿಚಾರವೇನೆಂದರೆ, ಸೇಲ್ಸ್ ಟ್ಯಾಕ್ಸ್ ಇಲಾಖೆಗೂ ಇಕಂಟ್ಯಾಕ್ಸ್ ಇಲಾಖೆಗೂ ಒಂದು ರೀತಿಯಲ್ಲಿ ಭಾಂದವ್ಯವಿರಬೇಕೆಂಬ ಉದ್ದೇಶದಿಂದ ತಂದಿರುವ ತಿದ್ದುಪಡಿ. ಈಗ ಸೇಲ್ಸ್ ಟ್ಯಾಕ್ಸ್ ಇಲಾಖೆಯವರು ಇಕಂಟ್ಯಾಕ್ಸ್ ಇಲಾಖೆಯವರಿಂದ ಕೆಲವು ವಿದ್ಯ

ಮಾನಗಳನ್ನು ವರ್ತಮಾನಗಳನ್ನು ತಿಳಿದುಕೊಳ್ಳಲು ಅವ ಕಾಶವಿದೆ. ಹೀಗೆಯೇ ಸೇಲ್ಸ್‌ಟ್ಯಾಕ್ಸ್ ಇಲಾಖೆಯ ವರಿಗೂ ಇಕಂಟ್ಯಾಕ್ಸ್ ಇಲಾಖೆಯವರಿಗೆ ತಿಳಿಸುವು ದಕ್ಕೆ ಅವಕಾಶವಿರಬೇಕು. ಈಗ ಸೇಲ್ಸ್‌ಟ್ಯಾಕ್ಸ್ ಕಾನೂನಿನ 24ನೆಯ ಸೆಕ್ಷನ್ ಪ್ರಕಾರ ಕ್ರಿಮಿನಲ್ ಮೊಕ ದ್ದಮೆ ಸಂಬಂಧದಲ್ಲಿ ಏನಾ ಬಾಕಿ ಯಾವ ಸಂದರ್ಭ ದಲ್ಲಿಯೂ ತಮಗೆ ಗೊತ್ತಿರತಕ್ಕ ವಿಷಯಗಳನ್ನು ಇತರ ರಿಗೆ ತಿಳಿಸಕೂಡದೆಂದು ವಿಧಾಯಕವಾಗಿದೆ. ಕ್ರಿಮಿ ನಲ್ ಪ್ರಾಸಿಕ್ಯೂಷನ್ ಅದ ಮೇಲೆ ಗುಪ್ತವಾಗಿಟ್ಟರಲು ಸಾಧ್ಯವೇ ಇಲ್ಲ. (ಬಿ) ಭಾಗದ ಸಂಸ್ಥಾನಗಳಲ್ಲಿ ಜಾರಿ ಯಲ್ಲಿರುವ ಇಕಂಟ್ಯಾಕ್ಸ್ ಕಾನೂನಿನಲ್ಲಿ ಸೇಲ್ಸ್‌ಟ್ಯಾಕ್ಸ್ ಇಲಾಖೆಯವರಿಗೆ ವಿಚಾರಗಳನ್ನು ತಿಳಿಸಲು ಅವ ಕಾಶಮಾಡಿದ್ದಾರೆ. ಈಗ ಇಕಂಟ್ಯಾಕ್ಸ್ ಇಲಾಖೆಯ ವರು ತಮಗೆ reciprocity ಇರಬೇಕೆಂದು ಕೇಳಿ ದ್ದಾರೆ.

Mr. SPEAKER.—Motion moved:—

"That the Mysore Sales Tax (Amendment) Bill, 1950, be taken into consideration."

ಶ್ರೀ ಕೆ. ಆರ್. ಮಾಧವರಾಯರು (ಶಿವಮೊಗ್ಗ ಜಿಲ್ಲೆ).—ಸ್ವಾಮಿ, ನಾನು ಈ ಮಸೂದೆಗೆ ಒಂದು ತಿದ್ದು ಪಡಿಯನ್ನು ಸೂಚಿಸುತ್ತೇನೆ. ನನ್ನ ತಿದ್ದುಪಡಿ ಹೀಗಿದೆ:—

"I beg to move that the Bill be referred to a Select Committee consisting of the following members.—

1. Hon'ble Minister for Finance (Chairman),
2. Sri W. H. Hanumanthappa.
3. ,, V. S. Narayana Rao.
4. ,, A. Bheemappa Naik.
5. ,, H. B. Gundappa Gowda.
6. ,, M. N. Mahanta Devaru.

ಈ ತಿದ್ದುಪಡಿಯನ್ನು ಸಮರ್ಥಿಸುತ್ತಾ ನಾನು ಒಂದು ವಿಷಯ ಹೇಳಬೇಕಾಗಿದೆ. ಈ ತಿದ್ದುಪಡಿ ಮಸೂ ದೆಯನ್ನು ನಭೆಯ ಮುಂದಿಟ್ಟ ಮಾನ್ಯಸಚಿವರು ಅವರ ಭಾಷಣದಲ್ಲಿ ತಿಳಿಸಿದ ಹಾಗೆ ಅನೇಕ ಚರ್ಚಾಸ್ಪದವಾದ ಸಂಗತಿಗಳು ಈ ತಿದ್ದುಪಡಿಯಿಂದ ಗೊತ್ತಾಗುತ್ತದೆ. ಈ ತಿದ್ದುಪಡಿ ಕಾನೂನನ್ನು ಜಾರಿಗೆ ತಂದರೆ ಇದರ ಸಾಧಕ ಬಾಧಕಗಳೇನು ಎಂಬುದನ್ನು ವಿಮರ್ಶೆಮಾ ಡುವುದಕ್ಕಾಗಿ ಒಂದು ಸೆಲೆಕ್ಟ್ ಕಮಿಟಿ ಮಾಡುವುದು ಸೂಕ್ತ. ಅವರು ಇದರಿಂದ ಉಂಟಾಗಬಹುದಾದ ಸಾಧಕ ಬಾಧಕಗಳನ್ನೆಲ್ಲಾ ವಿಮರ್ಶೆಮಾಡಿ ಒಂದು ವೇಳೆ ಜನತೆಯ ಹಿತದೃಷ್ಟಿಯಿಂದ ಇನ್ನು ಕೆಲವು ತಿದ್ದು ಪಡಿಗಳನ್ನು ಸೇರಿಸಬೇಕೆಂದು ಅಭಿಪ್ರಾಯಪಟ್ಟರೆ ಅವುಗಳನ್ನು ಸೇರಿಸಲಿಕ್ಕೆ ಅವಕಾಶವಾಗುತ್ತದೆ. ಈ ದೊಡ್ಡ ಸಭೆಯಲ್ಲಿ ಈ ಮಸೂದಾ ಕಾನೂನನ್ನು ನಾವು ವಿಮರ್ಶೆಮಾಡುವುದರಿಂದ ಕಾಲವಿಳಂಬವಾಗುತ್ತದೆ. ಈ ಕೆಲಸವನ್ನು ಸೆಲೆಕ್ಟ್ ಕಮಿಟಿಯವರು ಮಾಡಿ ನಭೆಯ ಮುಂದೆ ತಂದರೆ ಕಾಲವಿಳಂಬ ಹೆಚ್ಚಾಗದೆ ಅತಿ ಶೀಘ್ರವಾಗಿ ಪರಿಶೀಲಿಸಬಹುದು ಮತ್ತು ನಮ್ಮ ಅಭಿಮ ತವನ್ನು ತಿಳಿಸಬಹುದು. ಆದ್ದರಿಂದ ಈ ತಿದ್ದುಪಡಿಗೆ ನಭೆಯವರು ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆಮಾಡಿ ಕೊಳ್ಳುತ್ತೇನೆ.

Sri H. C. DASAPPA.—I have no objection.

Janab SYED ABDUR RAHMAN.—I propose that Janab Mohamed Haneef may also be included in the Select Committee.

Sri K. R. MADHAVA RAO.—I have no objection.

Mr. SPEAKER.—Amendment moved:

"That the Bill be referred to a Select Committee consisting of the following members:

Hon'ble Minister for Finance (Chairman),
Sri W. H. Hanumanthappa,
Sri V. S. Narayana Rao,
Sri A. Bheemappa Naik,
Sri H. B. Gundappa Gowda,
Sri M. N. Mahanta Devaru, and
Janab Mahomed Haneef.

The motion to consider together with the amendment motion to refer to a Select Committee are both before the House. Discussion may proceed on both motions.

ಶ್ರೀ ಎಂ. ಎಫ್. ಮಹಂತದೇವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಅರಿಕೆ ಮಾಡಿ ಕೊಳ್ಳಬೇಕೆಂದಿದ್ದೇನೆ. ಯಾವುದಾದರೂ ಒಂದು ತಿದ್ದು ಪಡಿ ತರಬೇಕಾದರೆ.

Sri K. SAMPANGIRAMIAH (Kolar District—General).—The Hon'ble Member is on the Select Committee.

Sri L. SIDDAPPA (Shimoga District—General).—That does not preclude him from speaking.

Sri K. SAMPANGIRAMIAH.—The Hon'ble Member is opposing the motion. As a matter of fact, his name is included in the list of select committee members.

Mr. SPEAKER.—Nothing wrong.

Sri M. N. MAHANTADEVARU—I am opposing the motion and in opposing ನಾನು ಕೆಲವು ವಿಷಯಗಳನ್ನು ಅರಿಕೆ ಮಾಡಿಕೊಳ್ಳ ಬೇಕೆಂದು ಇಷ್ಟಪಡುತ್ತೇನೆ. ಯಾವುದಾದರೂ ಒಂದು ತಿದ್ದುಪಡಿ ತರಬೇಕಾದ ಪಕ್ಷದಲ್ಲಿ ಆ ತಿದ್ದುಪಡಿ ಪ್ರಜೆ ಗಳ ಹಕ್ಕುಬಾಧ್ಯತೆಗಳಿಗೆ ಧಕ್ಕೆ ತರದಂತೆ ಇರ ಬೇಕಾದ್ದು ಮುಖ್ಯವಾಗಿದೆ.

Mr. SPEAKER.—Has the Hon'ble mover of the amendment obtained the consent of the Members to serve on the Select Committee?

Sri K. R. MADHAVA RAO.—No, Sir.

Janab J. MAHOMED IMAM (Chitaldrug *cum* Tumkur—Muslim).—Sir, if I may be pardoned, the usual procedure is first of all to discuss the Bill and then the amendment.

Mr. SPEAKER.—There is no harm. The members can speak both on the

main motion as well as on the amendment. ಮೊದಲೇ ವಿಚಾರ ಮಾಡಿ ಹೆಸರುಗಳನ್ನು ನೇರಿಸಿದ್ದಾರೆ. ಆ ಮೇಲೆ ಆ ಸದಸ್ಯರಿಗೆ ಮಾತನಾಡಲು ಅವಕಾಶವಿರುವುದಿಲ್ಲ.

Janab J. MAHOMED IMAM.—We are meeting two different propositions, one that the Bill be taken into consideration and the other that the Bill be referred to a select committee. We are speaking on both.

Mr. SPEAKER.—If the Hon'ble Mover of the amendment had taken the prior consent of the Hon'ble Member to serve on the Select Committee, perhaps he would not have got an opportunity to speak.

Rajamantrapravina H. B. GUNDAPPA GOWDA (Hassan District—General).—It is the right of every member to speak anything he likes. Merely because he is in the select committee, it does not mean that he should agree to the Bill.

Mr. SPEAKER.—He need not. But if he agreed to be on the select committee he might not choose to speak at length at this stage.

Sri H. B. GUNDAPPA GOWDA.—Generally, the procedure is that the Hon'ble Mover of the amendment should generally consult and take their prior consent to serve on the select committee.

ಶ್ರೀ ಎಂ. ಎಸ್. ಮಹಂತದೇವರು.—ಯಾವುದಾದರೂ ಒಂದು ತಿದ್ದುಪಡಿ ತರಬೇಕಾದ ಪಕ್ಷದಲ್ಲಿ ಆ ತಿದ್ದುಪಡಿಯು ಪ್ರಜೆಗಳ ಹಕ್ಕು ಬಾಧ್ಯತೆಗೆ ಧಕ್ಕೆ ಬರದಂತೆ ಇರಬೇಕಾದುದು ಅತ್ಯಾವಶ್ಯಕವಾಗಿದೆ. ಈ ತಿದ್ದುಪಡಿಯಲ್ಲಿ ಏನಾಗಿದೆಯೆಂದರೆ "civil" ಎನ್ನುವ ಪದವನ್ನು ತೆಗೆದುಹಾಕಬೇಕೆಂದು ಸೂಚನೆ ಮಾಡಿದ್ದಾರೆ. ಇದು ಇದ್ದರೆ ಏನಾಗುತ್ತದೆ, ತೆಗೆದು ಹಾಕಿದರೆ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. "Civil" ಎನ್ನುವುದು ಇರುವುದರಿಂದ ಕ್ರಿಮಿನಲ್ ಕೋರ್ಟ್‌ನವರು ಒಂದು ವೇಳೆ ಅಸೆಸ್‌ಮೆಂಟ್ ಕೊಡದೆ ತಪ್ಪಿಸಿಕೊಳ್ಳುವವರ ಮೇಲೆ ಕೇಸು ಹಾಕಿದಾಗ ಆ ಅಸೆಸ್‌ಮೆಂಟ್ ಹಾಕಿರುವುದು ತಪ್ಪೇ ಆಥವಾ ಸರಿಯೇ ಎನ್ನುವ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಆ "civil' ಎನ್ನುವ ಪದವನ್ನು ತೆಗೆದುಹಾಕಿದರೆ ಆ ಹಕ್ಕುಬಾಧ್ಯತೆಯೂ ಕೂಡ ಹೊರಟು' ಹೋಗುತ್ತದೆ. ಹೇಗೆಂದರೆ ಆ 22ನೆಯ ಸೆಕ್ಷನ್‌ನನ್ನು ಓದಿದರೆ ಗೊತ್ತಾಗುತ್ತದೆ. ಅದು ಈ ರೀತಿ ಇದೆ :—

"Save as provided under section 60, no assessment made and no order passed under the Act or the Rules made thereunder by any assessing authority shall be called in question in any civil court and save as is provided under section 14 and 15, no application for revision shall lie against any such assessment or order".

ಈಗ ನೀವು ಈ ಮಸೂದೆಯಲ್ಲಿ ಹೇಳಿರುವಂತೆ 'ಸಿವಿಲ್' ಎಂಬ ಪದವನ್ನು ತೆಗೆದು ಹಾಕಿಬಿಟ್ಟರೆ, ಆಗ ಯಾರೊಬ್ಬರಿಗೂ ಯಾವ ಕೋರ್ಟಿನಲ್ಲಾಗಲೀ ವಾದ ಮಾಡುವುದಕ್ಕೆ ಅವಕಾಶವೇ ಇರುವುದಿಲ್ಲ, ಹಾಲಿ ಇರುವ ರೀತಿಯಲ್ಲಾದರೆ ಸಿವಿಲ್ ಕೋರ್ಟಿನಲ್ಲಿ ಮಾತ್ರವಲ್ಲದೆ ಕ್ರಿಮಿನಲ್ ಕೋರ್ಟಿನಲ್ಲಿಯೂ ಸಹ ತನಗೆ ಹಾಕಿರುವ ಅಸೆಸ್‌ಮೆಂಟ್ ಸರಿಯಾಗಿಲ್ಲವೆಂದು ಚರ್ಚೆ ಮಾಡುವುದಕ್ಕೆ ಅವಕಾಶವಿರುತ್ತದೆ. ಅಂಥಾದ್ದರಲ್ಲಿ 'ಸಿವಿಲ್' ಎಂಬ ಪದ ಹೋಗಿಬಿಟ್ಟರೆ, ಸರ್ಕಾರದವರು ಪ್ರಾಸಿಕ್ಯೂಟ್ ಮಾಡುವಾಗ ಮ್ಯಾಜಿಸ್ಟ್ರೇಟರು ಇನ್ನೇನು ವಿಷಯವನ್ನೂ ಕೇಳದೇನೇ ನೇರವಾಗಿ ಆತನು ಟಾಕ್ಸ್ ಕೊಟ್ಟಿದ್ದಾನೆಯೇ ಇಲ್ಲವೇ ಎಂದು ಮಾತ್ರ ಕೇಳಿ, ಆತನು 'ಇಲ್ಲ' ಎಂದು ಹೇಳಿದಾಕ್ಷಣ ಶಿಕ್ಷೆ ವಿಧಿಸಲೇ ಬೇಕಾಗುತ್ತದೆ. ಆತನಿಗೆ ಹಾಕಿದ ಅಸೆಸ್‌ಮೆಂಟ್ ಸರಿಯಾಗಿತ್ತೇ ಇಲ್ಲವೆ ಎಂಬುದನ್ನು ಕೇಳುವಂತೆಯೇ ಇಲ್ಲ. ಅಪರಾಧಿಗೆ ಯಾವ ರೀತಿ 'ಡಿಫೆಂಡ್' ಮಾಡಿಕೊಳ್ಳುವುದಕ್ಕೂ ಮಾರ್ಗವೇ ಇಲ್ಲ. ಮದ್ರಾಸ್ ಆಕ್ಟಿನಲ್ಲಿ ಕೂಡ ಈ ತೆರದ ತಿದ್ದುಪಡಿ ಮಾಡಿರುವಂತೆ ಕಂಡು ಬಂದಿಲ್ಲ.

ಶ್ರೀ ಎಚ್. ಸಿ. ದಾಸಪ್ಪನವರು.—ಅಲ್ಲೂ 16 (A) ಎಂದು ಒಂದು ತಿದ್ದುಪಡಿ ಮಾಡಿದ್ದಾರೆ.

ಶ್ರೀ ಎಂ. ಎಸ್. ಮಹಂತದೇವರು.—ಏನೇ ಆಗಲಿ, ಇದರ ಪ್ರಕಾರ ವ್ಯಕ್ತಿಯ ಮೂಲಭೂತವಾದ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬಂದಂತಾಗುತ್ತದೆ. ಸೇಲ್ಸ್ ಟಾಕ್ಸ್ ಹಾಕಿದ ಮೇಲೆ ಅದು ಸರಿಯೇ ಅಲ್ಲವೇ ಎಂಬ ವಿಷಯದಲ್ಲಿ ಕೋರ್ಟಿನಲ್ಲಿ ವ್ಯವಹಾರ ನಡೆಸಲು ಅವಕಾಶ ವಿರಲೇಬೇಕು. ಹಾಲಿ ಇರುವಂತೆಯೇ ಇರುವುದು ಒಳ್ಳೆಯದೆಂದು ಹೇಳಿ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

ಶ್ರೀ ಎಚ್. ಸಿ. ದಾಸಪ್ಪನವರು.—ಈ ವಿಷಯದಲ್ಲಿ ಸದ್ಯಕ್ಕೆ ಚರ್ಚೆಯೇ ಅನಾವಶ್ಯಕವೆಂದು ನನಗೆ ಕಾಣುತ್ತದೆ. ಯಾವಾಗ ಸೆಲೆಕ್ಟ್ ಕಮಿಟಿಗೆ ಈ ಮಸೂದೆ ಹೋಗಬೇಕೆಂಬ ಸೂಚನೆ ಬಂದು ಅದು ಅಂಗೀಕೃತವಾಯಿತೋ, ಆಗ ಹೆಚ್ಚಾಗಿ ಈ ಸಂದರ್ಭದಲ್ಲಿ ಚರ್ಚೆ ಮಾಡಬೇಕಾದ್ದು ಅವಶ್ಯಕವಿಲ್ಲ.

Sri H. B. GUNDAPPA GOWDA.—But it is open for the members to express their views.

Sri H. C. DASAPPA.—I am not denying the right. I am saying that it may not be so profitable now to discuss the matter when we are referring it to the Select Committee.

Sri H. B. GUNDAPPA GOWDA.—The discussion that takes place here would be helpful to the Select Committee members; that cannot be denied.

Sri H. C. DASAPPA.—I am not denying that position. It is such a patent matter and as a sufficiently old member of the Legislature I may tell you that. What I say is, it is so

simple. Sections 22 and 24 are the two things there and you can leave them to the Select Committee.

Sri D. H. CHANDRASEKHARAIYA (Chitaldrug District-General).—Without reference to the Select Committee, the House has been committed to the principles of the Bill. Even the Select Committee cannot go beyond that.

Sri H. C. DASAPPA.—Sections 24 and 22 are there. If it is only one point, then I can understand. I have listened to the speeches. Nothing has been said regarding Section 24 corresponding to Section 54 of the Indian Income-Tax Act.

Sri H. SIDDAVEERAPPA (Chitaldrug District—General).—Since the Bill is going to be referred to the Select Committee, I do not wish to offer any criticism with regard to the Bill. What I want to know is, whether this clause if amended as is proposed in this Bill, in any way hampers the defence of the accused in the Criminal Court. The Select Committee should look into this matter as to how far and to what extent this is going to hamper the defence in the Criminal court.

Sri H. C. DASAPPA.—There are a number of matters on which there can be criminal prosecution, like non-production of accounts, falsification of accounts books, evasion of tax etc. Under Section 20 you find a number of things such as, failing to submit the report as required, or obstructing the inspection by an officer or collecting any amount under the tax in contravention of the provision and so on. Supposing he collects and does not pay? These are all offences under Section 20 which will invoke a criminal action. In that case, where is the fun of his trying to retaining the whole case of assessing? There is no doubt his defence to that extent may be effective. Whatever it is, its full implications will be examined by the Select Committee. Supposing the Select Committee reports against it, the Government may not press it.

Sri H. SIDDAVEERAPPA.—Regarding that clause, namely it entails criminal liabilities, supposing a man has been prosecuted for the offence of having submitted wilfully untrue return. Then it is open to him to say by way of defence, "I have submitted a true return.' At least, incidentally, for the purposes of defence the question of assessment will have to be re-opened. I am only submitting this point so that the Select Committee may take this into consideration.

Sri H. C. DASAPPA.—I have absolutely no objection. All these things will be gone into.

Mr. SPEAKER.—The question is:

"That the Bill be referred to a Select Committee consisting of the Minister for Finance and Industries (Chairman), Sri W. H. Hanumanthappa, Sri V. S. Narayana Rao, Sri A. Bheemappa Naik, Sri H. B. Gundappa Gowda, Sri M. N. Mahanthadevaru and Janab Mohamed Haneef."

The motion was adopted.

The Mysore Contingency Fund Bill, 1950.

Motion to consider.

Sri H. C DASAPPA (Minister for Finance and Industries).—Sir, I beg to move;

"That the Mysore Contingency Fund Bill, 1950, be taken into consideration."

ಸ್ವಾಮಿ, ಈ ವಿಚಾರದಲ್ಲಿ ನಾನು ಹೆಚ್ಚಾಗಿ ಹೇಳ ಬೇಕಾದ್ದೇನೂ ಇಲ್ಲ. ಹೊಸ ರಾಜ್ಯಾಂಗ ಶಾಸನದ ಪ್ರಕಾರ ಪ್ರತಿಯೊಂದು ಸರ್ಕಾರವೂ ಕಂಟಿಂಜೆನ್ಸಿ ಫಂಡ್ ಎಂದು ಒಂದು ಫಂಡ್ ಏರ್ಪಡಿಸಲೇಬೇಕು. ಇದುವರೆಗೂ ರೂಢಿಯಲ್ಲಿದ್ದ ಪದ್ಧತಿಯೇನೆಂದರೆ, ಯಾವುದಾದರೂ ಸಂದರ್ಭದಲ್ಲಿ ಬಜೆಟ್ಟಿನಲ್ಲಿ ಒದಗಿಸಿರುವುದಕ್ಕಿಂತಲೂ ಹೆಚ್ಚಿಗೆ ಖರ್ಚುಮಾಡಬೇಕಾದರೆ ಅಥವಾ ಬಜೆಟ್ಟಿನಲ್ಲಿ ನಿರೀಕ್ಷಿಸದೆ ಇರುವ ಯಾವುದಾದರೂ ಖರ್ಚನ್ನು ಮಾಡಬೇಕಾದರೆ, ಮೊದಲು ಅದನ್ನು ಖರ್ಚು ಮಾಡಿ ನಂತರ ಶಾಸನ ಸಭೆಯ ಮುಂದೆ ಅಡಿಷನಲ್ ಡಿಮ್ಯಾಂಡಾಗಿಯಾಗಲೀ ಅಥವಾ ಸಪ್ಲಿಮೆಂಟರಿ ಡಿಮ್ಯಾಂಡಾಗಿಯಾಗಲೀ ತಂದು ಸಭೆಯ ಒಪ್ಪಿಗೆ ಪಡೆಯುತ್ತಿದ್ದೆವು. ಆದರೆ ಈಗ ಹೊಸ ರಾಜ್ಯಾಂಗದ ಪ್ರಕಾರ ಆ ರೀತಿಯಾಗಿ ಮಾಡುವುದಕ್ಕೆ ಅವಕಾಶವೇ ಇಲ್ಲ. ಏನಿದ್ದರೂ ಹೀಗೆ ಹೆಚ್ಚಿಗೆ ಖರ್ಚಾಗಲೀ, ಅಥವಾ ಅನಿರೀಕ್ಷಿತವಾದ ಖರ್ಚಾಗಲೀ ಬಂದರೆ ಅದನ್ನು ಇಂಥ ಖರ್ಚುಗಳಿಗಾಗಿಯೇ ಎಂದು ಒಂದು ಕಂಟಿಂಜೆನ್ಸಿ ಫಂಡ್ ನಿರ್ಮಾಣ ಮಾಡಿಕೊಂಡು ಅದರಿಂದ ತೆಗೆದುಕೊಳ್ಳಬೇಕೇ ಹೊರತು ಬೇರೆ ರಹ ಇಲ್ಲ. ಈ ಫಂಡಿನಿಂದ ಎಷ್ಟು ಹಣವನ್ನು ನಾವು ತೆಗೆಯುತ್ತೇವೋ ಅದನ್ನು ಬರುವ ಸಭೆಯ ಮುಂದೆ ಒಂದು ಸಪ್ಲಿಮೆಂಟರಿ ಡಿಮ್ಯಾಂಡ್ ಇಟ್ಟು ಸಭೆಯ ಒಪ್ಪಿಗೆ ಪಡೆಯುವುದರ ಮೂಲಕ ಭರ್ತಿಮಾಡಿಕೊಳ್ಳಬಹುದು. ರಾಜ್ಯಾಂಗ ಶಾಸನದ 257 (2)ನೆಯ ವಿಧಿಯಲ್ಲಿ ಹೇಳಿರುವ ನಿಯಮ ಇದು. ಅದಕ್ಕನುಸಾರವಾಗಿ ಈ